**KATK810023202018**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಶಿರಾ**

**ಸಿ.ಸಿ.ಸಂಖ್ಯೆಃ 1264/2018**

**ಫಿರ್ಯಾದಿ : ಜಗನ್ನಾಥಶೆಟ್ಟಿ**

**ವಿರುದ್ಧ**

**ಆರೋಪಿ : ಬಿ.ವೈ ಕಾಟಪ್ಪ**

**ದಂಡ ಪ್ರಕ್ರಿಯ ಸಂಹಿತೆ ಕಲಂ. 313 ರಡಿಯಲ್ಲಿ ಆರೋಪಿಯ ವಿಚಾರಣೆ**

**ಪ್ರಶ್ನೆ:1:** ನೀವು ನ್ಯಾಯಾಲಯದಲ್ಲಿ ನುಡಿದಿರುವ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿರುವಿರಲ್ಲವೇ**?**

ಉತ್ತರಃ

**ಪ್ರಶ್ನೆ:1:**ನೀವು ನ್ಯಾಯಾಲಯದಲ್ಲಿ ನುಡಿದಿರುವ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿರುವಿರಿಲ್ಲವೇ**?**
ಉತ್ತರಃ

**ಪ್ರಶ್ನೆ:2:ಫ್ರಾಸಾ.1 ಜಗನ್ನಾಥಶೆಟ್ಟಿ,** ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಯು ಸುಮಾರು ವರ್ಷಗಳಿಂದ ಪರಿಚಯಸ್ಥರಿದ್ದು, ಅವರಿಂದ ಗೃಹಕೃತ್ಯ ತಾಪತ್ರಯಗಳಿಗಾಗಿ ರೂ.45,00,000/- ಹಣವನ್ನು ಸಾಲವಾಗಿ ಪಡೆದು ಆದಷ್ಟು ಬೇಗ ತೀರಿಸುವುದಾಗಿ ತಿಳಿಸಿದ್ದು, ನಂತರ ಹಣವನ್ನು ವಾಪಸ್ ಮಾಡಲು ಕೇಳಿದಾಗ ಆರೋಪಿಯು ದಿ.14.06.2018 ರಂದು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಚೆನ್ನಗಿರಿ, ದಾವಣಗೆರೆ ಜಿಲ್ಲೆ ಶಾಖೆಯ ಚೆಕ್ ನಂ.842632ನ್ನು ನೀಡಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ, ಈ ಬಗ್ಗೆ ಏನು ಹೇಳುವಿರಿ?
ಉತ್ತರಃ

**ಪ್ರಶ್ನೆ:3:ಫ್ರಾಸಾ.1ರವರು** ಮಂದುವರೆದು ಆರೋಪಿ ಕೊಟ್ಟ ಚೆಕ್ಕನ್ನು ಕೆನರಾ ಬ್ಯಾಂಕ್, ಶಿರಾ ಶಾಖೆಯಲ್ಲಿ ಹಣ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಸದರಿ ಚೆಕ್ ಖಾತೆಯಲ್ಲಿ

ಸಾಕಷ್ಟು ಹಣ ಇರುವುದಿಲ್ಲ ಎಂಬ ಹಿಂಬರಹದೊಂದಿಗೆ ದಿಃ15.06.2018 ರಂದು ವಾಪಸ್ಸಾಯಿತು ಎಂದು ಸಾಕ್ಷ ನುಡಿದಿರುತ್ತಾರೆ. ಈ ಬಗ್ಗೆ ಏನು ಹೇಳುವಿರಿ?

ಉತ್ತರ

**<u>ಪ್ರಶ್ನೆಃ4:</u> ಪ್ರಾಸಾ.1 ರವರು** ಮುಂದುವರೆದು ನಂತರ ಅವರು ಚೆಕ್ ಅಮಾನ್ಯಗೊಂಡ ಬಗ್ಗೆ ದಿ.19.06.2018 ರಂದು ನೋಟೀಸ್ ಕಳುಹಿಸಿದ್ದು, ಸದರಿ ನೊಟೀಸು ಜಾರಿಯಾಗಿದ್ದರೂ ಅದನ್ನು ಉದ್ದೇಶಪೂರ್ವಕವಾಗಿ ತೆಗೆದುಕೊಳ್ಳದೇ ಇದ್ದುದರಿಂದ ಸರಿಯಾದ ವಿಳಾಸವಿಲ್ಲ ಎಂಬ ಹಿಂಬರಹದೊಂದಿಗೆ ವಾಪಸ್ಸು ಬಂದಿರುವುದಾಗಿ ಹಾಗೂ ಆರೋಪಿಯು ಉದ್ದೇಶಪೂರ್ವಕವಾಗಿ ಅವರನ್ನು ವಂಚಿಸುವ ಸಲುವಾಗಿ ಚೆಕ್ಕನ್ನು ನೀಡಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಏನು ಹೇಳುವಿರಿ?

ಉತ್ತರಃ

**ಪ್ರಶ್ನೆಃ5:** ನೀವು ನಿಮ್ಮ ಪರವಾಗಿ ಈ ಕೇಸಿಗೆ ಸಂಬಂಧಪಟ್ಟಂತೆ ಏನಾದರೂ ಮೌಖಿಕ ಸಾಕ್ಷ್ಯ ಅಥವಾ ದಾಖಲಾತಿಗಳನ್ನು ಹಾಜರುಪಡಿಸುವಿರಾ?

ಉತ್ತರಃ

**ಪ್ರಶ್ನೆಃ6:** ಈ ಕೇಸಿನ ಬಗ್ಗೆ ಬೇರೆ ಏನಾದರೂ ಹೇಳುವುದು ಇದೆಯೇ?

ಉತ್ತರಃ

(ಈ ಮೇಲಿನ ಹೇಳಿಕೆಗಳನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರಿಂದ ಬಂದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

**ಸಹಿ/-**

**(ನರಸಿಂಹಮೂರ್ತಿ.ಎ)**

**ದಿನಾಂಕಃ 22.04.2025** **ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ.,ಸಿರಾ.**